

# ಮೈನವಿರೇಳಿಸುವ ಜಿರೇನಿಯಂ ಕಂಡಿರೇ?

- ಡಾ. ಸತ್ಯ



ಅಂದದ ಜಿರೇನಿಯಂ ತನ್ನ ಅಂದದ ಹಸಿರೆಲೆಗಳಿಗೆ, ಸುಗಂಧದ ಸುವಾಸನೆಗೆ ಮಾತ್ರ ಅಲ್ಲ. ಕೆಲವು ಪ್ರಭೇದಗಳು ಕೀಟ ಸಂಕುಲಗಳ ನೆಚ್ಚಿನ ಮೆಚ್ಚಿನ ಸಂಗಾತಿ. ಬಣ್ಣ ಬಣ್ಣದ ಮೋಡಿಯ ಸುಮ ಸಂದೋಹ ಅರಳಿಸಿಕೊಳ್ಳುವ ಜಿರೇನಿಯಂ ನಿಮ್ಮ ಮನೆಯಂಗಳದ ಬೆಡಗಿನ ಗಿಡವಾಗಬೇಕೆ? ಹಾಗಾದರೆ ಈ ಗಿಡದ ಪರಿಚಯ ಮಾಡಿಕೊಳ್ಳಿರಿ. ನಿಮ್ಮ ಮನೆಯಂಗಳದ ಪಾತಿಗೋ, ಹೂಕುಂಡಗಳ ಕೃಷಿಗೋ ಬಳಸಿರಿ. ಅಂಗಳದ ಅಂದ ಚಂದದ ಜತೆಗೆ ನಿಮ್ಮ ಹೆಮ್ಮೆ ಹೆಚ್ಚಿಸಿಕೊಳ್ಳಿರಿ. ಒಂದು ಆಡು ಮಾತಿದೆ. ಹೂವಿನ ಜತೆಗೆ ನಾರು ಸಹ ಸ್ವರ್ಗ ಸೇರಿದಂತೆ. ನಿಜ ಆ ಮಾತಿನ ಹಿಂದೆ ಸತ್ಯ ಇದೆ. ದೇವರ ಮುಡಿಗೆ ಅಥವಾ ಗಣ್ಯಾತಿಗಣ್ಯರ ಕೊರಳಿಗೆ ಭಾರದ ಹಾರ ತುರಾಯಿ ಹಾಕುವುದು ಸಂಪ್ರದಾಯ. ಅಂಥ ಹಾರದ ಭಾರದಲ್ಲಿ ಹಸಿರೆಲೆ ನೀವು ಕಂಡಿರಬೇಕಲ್ಲ. ಆಡು ಭಾಷೆಯಲ್ಲಿ ಆ ಹಸಿರೆಲೆಗೆ ಪನ್ನೀರೆಲೆ ಎಂಬರು. ಇದೇ ಜಿರೇನಿಯಂ.

ಅಂದ ಹಾಗೆ ಈ ಹಸಿರೆಲೆ ಜತೆ ಗುಲಾಬಿ ಅಥವಾ ಸುಗಂಧ ರಾಜ ಸುಮಗಳನ್ನು ಪೋಣಿಸುವ ಉದ್ದೇಶದ ಹಿಂದೆ ಮಹತ್ವ ಇದೆಯೇ ಅರಿಯೋಣ. ಹಿಂದಿನಿಂದಲೂ ಈ

ರೀತಿಯ ಬಳಕೆ ಪ್ರಚಲಿತ. ಸುವಾಸನೆಯ ಹೂಗಳ ಮತ್ತು ಎಲೆಗಳ ದೆಸೆಯಿಂದ ಮನಸ್ಸು ಪ್ರಫುಲ್ಲಗೊಳ್ಳುವ ಸಂಗತಿ ನಮ್ಮ ಹಿಂದಿನ ತಲೆಮಾರಿನ ಮಂದಿಗೆ ತಿಳಿದಿತ್ತು. ನಿಮ್ಮ ಮುದುಡಿದ ಮನಸ್ಸನ್ನು ಅರಳಿಸಿ ಮುದಗೊಳಿಸುವ ಅಪಾರ ಶಕ್ತಿ ಅಂದದ ಹೂಗಳಿಗಿವೆ. ಸುಗಂಧದ ಎಲೆ ಮತ್ತು ಎಸಳುಗಳಿಗಿವೆ. ಇದೇ ಉದ್ದೇಶದಿಂದ ನಾವು ನಮ್ಮ ಹಬ್ಬ ಹರಿದಿನಗಳಲ್ಲಿ ಮತ್ತು ಸಮಾರಂಭಗಳಲ್ಲಿ ಯಥೇಚ್ಛವಾಗಿ ಹೂಗಳನ್ನು ಸುಗಂಧ ವಸ್ತುಗಳನ್ನು ಬಳಸುವೆವು. ನಮ್ಮ ಹಿಂದಿನ ತಲೆಮಾರಿನ ಮಂದಿಯ ಸೌಂದರ್ಯ ಪ್ರಜ್ಞೆ ಮತ್ತು ವೈಜ್ಞಾನಿಕ ಅರಿವು ನಿಜಕ್ಕೂ ಹಿರಿಮೆಯದಾಗಿತ್ತು.



ಜಿರೇನಿಯಂ ಕೃಷಿ ಬಹಳ ಸರಳ. ಮಂಕರಿ ತುಂಬ ಮಣ್ಣು ತುಂಬಿದ ಸಿಮೆಂಟ್ ಕುಂಡ ಅಥವಾ ಮಣ್ಣಿನ ಕುಂಡದಲ್ಲಿ ನೀವು ಬಲಿತ ಹಸಿರೆಂಬೆ ಊರಿ ಬಿಡಿ. ಬಲಿತ ಗಿಡದಿಂದ ಸುಮಾರು ೨೦ ಸೆ. ಮೀ. ಉದ್ದದ ರೆಂಬೆ ತುಂಡುಗಳನ್ನು ಕತ್ತರಿಸಿ. ತುದಿಯ ನಾಕಾರು ಎಲೆ ಬಿಡುವಿರಂತೆ ಹರಿತ ಕತ್ತರಿಯಿಂದ ಏಳೆಂಟು ಗಿಣ್ಣಿನ ಕೆಳಗೆ ಕತ್ತರಿಸಿದ ಹೊಸ ರೆಂಬೆಯ ಸಹಾಯ ಪಡೆದು ಹೊಸ ಗಿಡ ಸೃಷ್ಟಿ. ನಾಕಾರು ದಿನಗಳಲ್ಲಿ ಹೊಸ ಗಿಡ ಚಿಗುರೀತು. ಪ್ರತಿ ವರುಷ ನೀವು ಮಣ್ಣನ್ನು ಬದಲಾಯಿಸ ಬೇಕಾದ ಪ್ರಮೇಯವಿದೆ. ಹಾಗಾಗಿ ನಿಮಗೆ ಅನುಕೂಲವಿದ್ದರೆ ತಾರಸಿ ಅಥವಾ ಬಾಲ್ಕನಿಯಲ್ಲಿ ನೀವು ಕಡಿಮೆ ದುಡ್ಡಿನಲ್ಲಿ ಜಿರೇನಿಯಂ ಹೊಸ ಗಿಡ ಕೃಷಿ ಆರಂಭಿಸಬಹುದು. ಸಿಮೆಂಟ್ ಖಾಲಿ ಚೀಲದಲ್ಲಿ ಒಳ್ಳೆಉ ಮಣ್ಣು ತುಂಬಿರಿ. ಗಿಡದ ಬಲಿತ ರೆಂಬೆ ಊರಿ ಬಿಡಿ. ಬೇಕಾದೆಡೆಗೆ ಒಯ್ಯಲು ಸಹ ಸಾಧ್ಯ. ಗರಿಷ್ಟ ನೀರಿನ ಬೇಡಿಕೆ ಇಲ್ಲದ ಜರೇನಿಯಂ ತುಂಬಾ ಚೆನ್ನಾಗಿ ಬೆಳೆಯಲು ಕೊಂಚ ಚಳಿ ಹವೆ ಬೇಕು. ಸುಂದರ ಹೂಗಳ ಜಿರೇನಿಯಂ ನಾನಾ ಬಣ್ಣದಲ್ಲಿ ನಿಮಗೆ ಲಭ್ಯ. ಅದರ ಅಂದ ಚಂದಕ್ಕೆ ಮರುಳಾಗದವರಿಲ್ಲ. ಅವುಗಳೂ ಸಹ ನಿಮ್ಮ ತೋಟದ ಸಿಂಗಾರಕ್ಕೆ  ಬೆಡಗಿನ ಕೊಡುಗೆಯೆ ಸೈ. ಪನ್ನೀರೆಲೆ ಮತ್ತು ಹೂ ದಳಿವ ಜಿರೇನಿಯಂಗಳು ಸೋದರ ಸಂಬಂಧಿಗಳು. ಬಿಳಿ, ಕೆಂಪು, ಗುಲಾಬಿ, ನರುಗೆಂಪು, ಪಿಂಕ್ ರಂಗಿನ ಜಿರೇನಿಯಂಗಳ ಪಾತ್ರ ನಿಮ್ಮ ಅಂಗಳದ ಅಂದ ಹೆಚ್ಚಿಸಲು ಅನಿವಾರ್ಯ. ವಿಜ್ಞಾನಿಗಳ ಪರಿಭಾಷೆಯಲ್ಲಿ ಜಿರೇನಿಯೇಸಿ ಕುಲದ ಪೆಲರ್ ಗೋನಿಯಂ ಎಂಬ ಹೆಸರಿನ ಈ ಗಿಡದ ತವರು ಯುರೋಪ್. ಅಂಗಳದಅಂದ ಹೂಗಳ ಜಿರೇನಿಯಂ ಸಹ ಪರಿಮಳ ಎಲೆಯ ಸಸ್ಯದ ಹಾಗೆ ಸುಂದರ ಮತ್ತು ಉಪಕಾರಿ.  ಆದರೆ ಇಂದು ಸುಗಂಧ ಸಸ್ಯಗಳ ಕೃಷಿಯಲ್ಲಿ ಜಿರೇನಿಯಂ ಸಸ್ಯಕ್ಕೆ ಪ್ರಥಮ ಪ್ರಾಶಸ್ತ್ಯ. ಇಂದು ಪನ್ನೀರೆಲೆ ಕೃಷಿಯು ನಿರೀಕ್ಷೆಯ ಮಟ್ಟದಲ್ಲಿ ನಮ್ಮ ದೇಶದಲ್ಲಿ ನಡೆಯುತ್ತಿಲ್ಲ. ನಮ್ಮ ದೇಶದ ಸುಗಂಧ ವಸ್ತು ಕೈಗಾರಿಕೆಯಲ್ಲಿ ವರುಷವೊಂದಕ್ಕೆ ಸುಮಾರು ೨೦ ಟನ್ ಪನ್ನೀರೆಲೆ ಎಣ್ಣೆಯ ಬೇಡಿಕೆ ಇದೆ. ಆದರೆ ಇಂದು ನಾವು ಉತ್ಪಾದಿಸುವುದು ಕೇವಲ ಎರಡು ಟನ್ ಮಾತ್ರ.

ಜಿರೇನಿಯಂ ಗಿಡಗಳಿಗೆ ಗೆದ್ದಲು ಕಾಟ ಇದೆ. ತಡೆಯಲು ಆಗಾಗ ಬುಡದಲ್ಲಿ ಮಣ್ಣು ನಿರೀಕ್ಷೆ ಮಾಡುವುದು ಸೂಕ್ತ. ಬೇವಿನ ಹಿಂಡಿ ಕಲಸಿ ಬುಡಕ್ಕೆ ಅಪರೂಪಕ್ಕೊಮ್ಮೆ ಕೊಡಬಹುದು. ವಿಲ್ಟ್ ಎಂಬ ಬಾಧೆ ಸಹ ಜಿರೇನಿಯಂ ಕೃಷಿಗೆ ಕಾಡುವುದುಂಟು. ಅದರ ನಿಯಂತ್ರಣಕ್ಕೆ ರೋಗ ದ ಆರಂಭದಲ್ಲಿ ಚೆಂಡು ಹೂ ಪಕಳೆಗಳ ಘನ ಸಾರ ಸಿಂಪರಣೆ ಸೂಕ್ತ.